# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1059 |
| ಸದಸ್ಯರ ಹೆಸರು | : | ಶ್ರೀ ಎಸ್. ನಾಗರಾಜ್ (ಸಂದೇಶ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 16-03-2020 |
| ಉತ್ತರಿಸುವ ಸಚಿವರು | : | ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವರು |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಎಷ್ಟು ಪ್ರಾಥಮಿಕ, ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ನಿವೇಶನ/ಕಟ್ಟಡದ ದಾಖಲಾತಿ, ಖಾತೆ, ಕಂದಾಯದ ಪ್ರಮಾಣ ಪತ್ರಗಳು ದೊರೆಯುತ್ತಿಲ್ಲ.</td><td>ನಿವೇಶನ / ಕಟ್ಟಡದ ದಾಖಲಾತಿ, ಖಾತೆ, ಕಂದಾಯದ ಪ್ರಮಾಣ ಪತ್ರಗಳು ದೊರೆಯುತ್ತಿಲ್ಲದ ಸರ್ಕಾರಿ ಶಾಲೆಗಳ ವಿವರಗಳು ಈ ಕೆಳಗಿನಂತಿವೆ.
<table>
<tr><th></th><th>ಸ.ಕಿ.ಪ್ರಾ. ಶಾಲೆಗಳ ಸಂಖ್ಯೆ</th><th>ಸ.ಹಿ.ಪ್ರಾ. ಶಾಲೆಗಳ ಸಂಖ್ಯೆ</th><th>ಸರ್ಕಾರಿ ಪ್ರೌಢ ಶಾಲೆಗಳ ಸಂಖ್ಯೆ</th></tr>
<tr><td>ಮೈಸೂರು ಜಿಲ್ಲೆ</td><td>341</td><td>405</td><td>96</td></tr>
<tr><td>ಚಾಮರಾಜನಗರ ಜಿಲ್ಲೆ.</td><td>01</td><td>04</td><td>00</td></tr>
<tr><td>ಒಟ್ಟು</td><td>342</td><td>409</td><td>96</td></tr>
</table></td></tr>
<tr><td>ಆ.</td><td>ಈ ಶಾಲೆಗಳು ಇರುವ ಜಾಗದ ವಿಸ್ತೀರ್ಣ, ಆಟದ ಮೈದಾನದ ವಿಸ್ತೀರ್ಣ, ಚಕ್ಕುಬಂದಿ, ಖಾತೆ ಹಾಗೂ ಕಂದಾಯ ಪ್ರಮಾಣ ಪತ್ರಗಳನ್ನು ಅಧಿಕೃತವಾಗಿ ಪಡೆದುಕೊಂಡು, ಸರ್ವೆ ಮಾಡಿಸಿ, ಅತಿಕ್ರಮಣ ಇದ್ದಲ್ಲಿ ತೆರವುಗೊಳಿಸಿ ಶಾಲೆಗಳ ಜಾಗಕ್ಕೆ ಬೇಲಿ ಅಥವಾ ಕಾಂಪೌಂಡ್ ಹಾಕಿಸಿ ರಕ್ಷಣೆ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದೇ;</td><td>ಆಯಾ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಯನ್ನು ಶಾಲಾ ಆಸ್ತಿ ರಕ್ಷಿಸಲು ಏಸ್ಟೇಟ್ ಅಧಿಕಾರಿಯನ್ನಾಗಿ ನೇಮಿಸಿ ಆದೇಶ ಹೊರಡಿಸಿದೆ.<br>ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಸುತ್ತೋಲೆ ದಿನಾಂಕ:08.07.2016 ರಂತೆ ರಾಜ್ಯದ ಎಲ್ಲಾ ಸರ್ಕಾರಿ ಶಾಲಾ ನಿವೇಶನ / ಕಟ್ಟಡಗಳು ಒತ್ತುವರಿಯಾಗಿದ್ದಲ್ಲಿ ಕೂಡಲೇ ಸುಪರ್ದಿಗೆ ತೆಗೆದುಕೊಳ್ಳಲು ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ತಿಳಿಸಲಾಗಿದೆ.</td></tr>
</table>

| | | |
|---|---|---|
| | ಈ ಬಗ್ಗೆ ವಿಶೇಷ ಡ್ರೈವ್ ಒಂದನ್ನು ನಡೆಸಲು ಸೂಚಿಸಲಾಗುವುದೇ? | ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 567 ಪಿಬಿಎಸ್ 2018. ದಿನಾಂಕ:30-11-2018 ರಂತೆ ಸಾರ್ವಜನಿಕ ಶಿಕ್ಷಣ ಇಲಾಖಾ ವ್ಯಾಪ್ತಿಯಲ್ಲಿರುವ ಸರ್ಕಾರಿ ಶಾಲೆಗಳ ಜಾಗದ ಖಾತೆಗಳನ್ನು ಶಾಲೆಗಳ ಹೆಸರಿಗೆ ಪಡೆಯಲು ಕ್ರಮವಹಿಸಲು ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ತಿಳಿಸಲಾಗಿದೆ. ಈ ಬಗ್ಗೆ ಉನಿರ್ದೇಶಕರುಗಳ ಸಭೆಯಲ್ಲಿ ಸಹ ಸೂಚನೆಗಳನ್ನು ನೀಡಲಾಗುತ್ತದೆ.<br>ಶಾಲೆಗಳ ನಿವೇಶನ / ಕಟ್ಟಡದ ದಾಖಲಾತಿ, ಖಾತೆ, ಕಂದಾಯದ ಪ್ರಮಾಣ ಪತ್ರಗಳನ್ನು ಪಡೆಯಲು ಸಂಬಂಧಿಸಿದ ತಾಲ್ಲೂಕು ಮತ್ತು ಜಿಲ್ಲಾಡಳಿತದ ನೆರವನ್ನು ಕೋರಲಾಗುತ್ತಿದೆ. |

**ಇಪಿ 18 ಪಿಎಂಎ 2020**

(ಎಸ್. ಸುರೇಶ್ ಕುಮಾರ್)

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವರು.